# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 787 |
| ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾ ದಿನಾಂಕ | 21.08.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ಹಾಗೂ ಇತರೆ ಸಾರ್ವಜನಿಕ ರಸ್ತೆಗಳಿಗೆ ಹೊಂದಿಕೊಂಡಿರುವ ಖಾಸಗಿ ಜಮೀನುಗಳಲ್ಲಿ 90 ಡಿಗ್ರಿ ಲಂಬ ಕಟಿಂಗ್ (Vertical Cutting) ಗುಡ್ಡ ಕತ್ತರಿಸುವಿಕೆ, ಮಣ್ಣು ತೆಗೆಯುವಿಕೆ ಹಾಗೂ ಗಣಿಗಾರಿಕೆ ಚಟುವಟಿಕೆಗಳಿಂದ ಮಳೆಗಾಲದಲ್ಲಿ ಭೂಕುಸಿತ, ಮಣ್ಣು ಕುಸಿತ ಹಾಗೂ ಸಾರ್ವಜನಿಕರಿಗೆ ಜೀವ-ಆಸ್ತಿ ಅಪಾಯ ಉಂಟಾಗುತ್ತಿದ್ದು ಈ ಕುರಿತು ಸರ್ಕಾರದ ಕ್ರಮಗಳೇನು; | • ರಾಜ್ಯದ ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ಹಾಗೂ ಇತರೆ ಸಾರ್ವಜನಿಕ ರಸ್ತೆಗಳ ನಿರ್ಮಾಣ / ಅಗಲೀಕರಣ ಸಮಯದಲ್ಲಿ ಅತೀ ಹೆಚ್ಚು ಎತ್ತರದ ಗುಡ್ಡಗಳನ್ನು ಕಡಿದು ರಸ್ತೆ ನಿರ್ಮಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ರಸ್ತೆ ಕಾಮಗಾರಿ ಅನುಷ್ಠಾನ ಇಲಾಖೆಗಳು ಭಾರತ ಸರ್ಕಾರದ IRC SP 48-2023 (Indian Road Congress) ರ ಅನುಸಾರ ಸಂಬಂದಪಟ್ಟ ಪ್ರಾಧಿಕಾರ / ಇಲಾಖೆ ಅಗತ್ಯ ಕ್ರಮ ವಹಿಸಬೇಕಾಗಿದೆ.<br>• ಅದರಂತೆ ಸಾಧಾರಣ ಮಣ್ಣಿನಲ್ಲಿ ಅಗೆತದ ಇಳಿಜಾರನ್ನು 1:1 ರಿಂದ ½:1 ಅನುಪಾತದಲ್ಲಿ ನಿರ್ಮಿಸಲಾಗುವುದು ಹಾಗೂ ಮಣ್ಣಿನ ಗುಣ ವಿಶ್ಲೇಷಣೆಯಂತೆ ಇಳಿಜಾರಿನ ಪ್ರಮಾಣವನ್ನು ಮೆದು ಬಂಡೆಯಲ್ಲಿ ¼:1 ರಿಂದ 1/8:1 ಅನುಪಾತದಲ್ಲಿ ಹಾಗೂ ಗಟ್ಟಿಬಂಡೆ ಸ್ಥಳಗಳಲ್ಲಿ ನೇರ ಅಗೆತದಂತೆ (ಅಂದಾಜು 80-90 ಡಿಗ್ರಿ) ಕಡಿತವನ್ನು ಕೈಗೊಳ್ಳಲಾಗುತ್ತದೆ.<br>• ಇದಲ್ಲದೆ, ಮಣ್ಣಿನ ಗುಣ ಲಕ್ಷಣ ಹಾಗೂ ಭೌಗೋಳಿಕ ಆಧಾರದಲ್ಲಿ ಅಧಿಕ ಮಳೆಯಾಗುವ ಪ್ರದೇಶಗಳಲ್ಲಿ ಹೆಚ್ಚಿನ ಸುರಕ್ಷತೆ ಕ್ರಮಗಳಾಗಿ **Soil nailing, retaining wall, gabion wall, wire net roping** ಮುಂತಾದ ಹೆಚ್ಚಿನ ಸುರಕ್ಷತೆ ಕಾಮಗಾರಿಗಳನ್ನು ಅವಶ್ಯಕತೆಗೆ ತಕ್ಕಂತೆ ಕೈಗೊಳ್ಳಲಾಗುತ್ತದೆ.<br>• ಜಿಲ್ಲಾಧಿಕಾರಿಗಳ / ತಹಶೀಲ್ದಾರ್ ಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ / ತಾಲೂಕು ವಿಪತ್ತು ನಿರ್ವಹಣೆ ಟಾಸ್ಕ್ ಫೋರ್ಸ್ ಸಮಿತಿಗಳಲ್ಲಿ ಚರ್ಚಿಸಿ ಮಳೆಗಾಲದ ಪೂರ್ವದಲ್ಲಿ ಈ ರೀತಿಯ ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಸ್ಥಳಗಳಲ್ಲಿ ತಾಂತ್ರಿಕವಾಗಿ ರಿಟೈನಿಂಗ್ ವಾಲ್‌ಗಳು, ಬ್ರೆಸ್ಟ್ ವಾಲ್‌ಗಳು, ಗೇಬಿಯನ್ ವಾಲ್‌ಗಳು ಇಳಿಜಾರು ಪಿಚಿಂಗ್, ಒಳಚರಂಡಿ ವ್ಯವಸ್ಥೆಗಳು ಹಾಗೂ ಇತರ ಸೂಕ್ತ ಗುಡ್ಡ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. |
| ಆ) | ರಸ್ತೆಗಳಿಗೆ ಹೊಂದಿಕೊಂಡಿರುವ ಖಾಸಗಿ ಮತ್ತು ಸರ್ಕಾರಿ ಜಮೀನುಗಳಲ್ಲಿ 90 ಡಿಗ್ರಿ ಕಟಿಂಗ್ ಅಥವಾ ಮಣ್ಣು ತೆಗೆಯಲು ಯಾವ ಕಾನೂನು, ನಿಯಮ ಹಾಗೂ ತಾಂತ್ರಿಕ ಮಾನದಂಡಗಳು ಅನ್ವಯಿಸುತ್ತಿವೆ; | • ರಾಜ್ಯದ ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ರಸ್ತೆಗಳಿಗೆ ಹೊಂದಿಕೊಂಡಿರುವ ಖಾಸಗಿ ಮತ್ತು ಸರ್ಕಾರಿ ಜಮೀನುಗಳು ಹಾಗೂ ಗುಡ್ಡ ಪ್ರದೇಶದಲ್ಲಿ ರಸ್ತೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ಗುಡ್ಡ ಅಥವಾ ಎತ್ತರದ ಮಣ್ಣಿನ ಪ್ರದೇಶವನ್ನು ಕತ್ತರಿಸುವ ಸಂದರ್ಭದಲ್ಲಿ ಆಯಾ ಪ್ರದೇಶದ ಮಣ್ಣಿನ ಗುಣಲಕ್ಷಣ / ವಿಧಗಳ ಆಧಾರದಲ್ಲಿ ಇಳಿಜಾರಿನ ಆಳತೆಯ ಅನುಪಾತವನ್ನು ನಿರ್ಧರಿಸುವಂತೆ IRC:SP:48 (Hill Road Manual), IRC:56 (Recommended Practices for Treatment of Cut Slopes), Standard MoRTH / IRC specification for Eartwork (Section 300) ಗಳಲ್ಲಿ ತಿಳಿಸಿರುವ ಮಾನದಂಡಗಳನ್ವಯ ಕ್ರಮವಹಿಸಲಾಗುತ್ತಿದೆ. |
| ಇ) | ಗಣಿ ಮತ್ತು ಭೂವಿಜ್ಞಾನ ಇಲಾಖೆ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ಅನುಮತಿ ಪಡೆಯದೆ ಇಂತಹ ಕಟಿಂಗ್ ಅಥವಾ ಮಣ್ಣು ತೆಗೆಯುವುದು ಮತ್ತು ತುಂಬಿಸುವುದು ಕಾನೂನುಬದ್ಧವೇ; ಇದರಿಂದಾಗುವ ಕೃಷಿ ಹಾನಿಗೆ ಹೊಣೆ ಯಾರು; | • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-A(a) ರಂತೆ ಪಟ್ಟಾ ಜಮೀನುಗಳನ್ನು ಸಮತಟ್ಟು ಮಾಡಿಕೊಂಡು ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಣ್ಣು ತೆಗೆಯಲು ಹಾಗೂ ಇಂತಹ ಸಂದರ್ಭದಲ್ಲಿ ದೊರೆತ ಮಣ್ಣನ್ನು ಸ್ವಂತ ಬಳಕೆ ನಂತರ ಮಾರಾಟ ಮಾಡಲು ಉದ್ದೇಶಿಸಿದಲ್ಲಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಖನಿಜ ರವಾನೆ ಪರವಾನಿಗೆಯೊಂದಿಗೆ ಸಾಗಾಣಿಕೆ ಮಾಡಲು ಕಾರ್ಯಾದೇಶ ನೀಡಲಾಗುತ್ತಿದೆ.<br>• ರಾಷ್ಟ್ರೀಯ ಹೆದ್ದಾರಿ / ರಾಜ್ಯ ಹೆದ್ದಾರಿ ಪಥದಲ್ಲಿ ದೊರೆಯುವ ಮಣ್ಣನ್ನು ಸದರಿ ಕಾಮಗಾರಿಗಳಲ್ಲಿ ಬಳಸಿಕೊಂಡಲ್ಲಿ ದೊರೆಯುವ ಮಣ್ಣಿನ ಪ್ರಮಾಣದ ಕುರಿತು ಸ್ವಯಂ ಘೋಷಣೆಯೊಂದಿಗೆ ರಾಜಧನ |

| | | |
|---|---|---|
| | | ಪಾವತಿಸಲು ಅವಕಾಶವಿರುತ್ತದೆ.<br>• ಖಾಸಗಿ / ಸರ್ಕಾರಿ ಜಮೀನುಗಳಲ್ಲಿ ಯಾವುದೇ ಮಣ್ಣು ಅಗೆಯುವುದು, ಗಣಿಗಾರಿಕೆ ಅಥವಾ ಮಣ್ಣು ತೆಗೆಯುವ ಚಟುವಟಿಕೆಗಳನ್ನು ಕೈಗೊಳ್ಳುವ ಮೊದಲು ಅನ್ವಯವಾಗುವ ಕಾನೂನುಗಳ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳಿಂದ ಅಗತ್ಯವಿರುವ ಕಾನೂನುಬದ್ಧ ಅನುಮತಿಗಳನ್ನು ಪಡೆಯುವುದು ಕಡ್ಡಾಯ. ನಿಯಮಗಳಲ್ಲಿ 90 ಡಿಗ್ರಿ ಕಟಿಂಗ್ ಮೂಲಕ ಮಣ್ಣು ತೆಗೆಯಲು ಯಾವುದೇ ಉಲ್ಲೇಖ / ಅವಕಾಶಗಳು ಇರುವುದಿಲ್ಲ. |
| ಈ) | ವಿಶೇಷವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಭೂಕುಸಿತದ ಅಪಾಯ ಇರುವ ಸ್ಥಳಗಳನ್ನು ಗುರುತಿಸಿ ವೈಜ್ಞಾನಿಕ ಪರಿಶೀಲನೆ **(Geotechnical Assessment)** ನಡೆಸಲಾಗುತ್ತಿದೆಯೇ; ರಸ್ತೆ ಬದಿಯಲ್ಲಿ ಅಪಾಯಕಾರಿ 90 ಡಿಗ್ರಿ ಕಟಿಂಗ್ ಮಾಡಿರುವ ಪ್ರಕರಣಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ನೋಟೀಸ್‌ಗಳು, ದಂಡ, ಪ್ರಕರಣಗಳು ಹಾಗೂ ಪುನಃಸ್ಥಾಪನೆ **(Restoration)** ಆದೇಶಗಳನ್ನು ನೀಡಲಾಗಿದೆ; | • ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ರಸ್ತೆಗಳಲ್ಲಿ ಅಪಾಯಕಾರಿ 90 ಡಿಗ್ರಿ ಕಟಿಂಗ್ ಮಾಡಿರುವ ಪ್ರಕರಣಗಳು ಸಂಭವಿಸಿರುವುದಿಲ್ಲ. ಆದಾಗ್ಯೂ, ಭೂಕುಸಿತವಾಗುವ ಪ್ರದೇಶಗಳನ್ನು ವೈಜ್ಞಾನಿಕ ಪರಿಶೀಲನೆಗೆ ಒಳಪಡಿಸಿ ತಡೆಗೋಡೆ, ಸಾಯಿಲ್ ನೈಲಿಂಗ್ (Soil Nailing), ಶಾಟ್‌ಕ್ರೀಟಿಂಗ್ (Shot creating), ಇತ್ಯಾದಿ ಪ್ರಾವಧಾನದೊಂದಿಗೆ ಭೂಕುಸಿತ ತಡೆಗಟ್ಟಲು ಕ್ರಮವಹಿಸಲಾಗಿರುತ್ತದೆ.<br>• ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ಯೋಜನೆಗಳ ಗುತ್ತಿಗೆದಾರರು/ ರಿಯಾತಿದಾರರು ರಾಷ್ಟ್ರೀಯ ಹೆದ್ದಾರಿ ಮಾರ್ಗಗಳಲ್ಲಿ ನಿಯಮಿತವಾಗಿ ಪರಿಶೀಲನೆಗಳನ್ನು ನಡೆಸಿ, ಭೂಕುಸಿತ ಮಣ್ಣಿನ ಸವೆತ ಹಾಗೂ ಇಳಿಜಾರು ಅಸ್ಥಿರತೆಗೆ ಒಳಗಾಗುವ ಸಾಧ್ಯತೆಯಿರುವ ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಕಡೆಗಳಲ್ಲಿ RoW / SH ವ್ಯಾಪ್ತಿಯೊಳಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. |
| ಉ) | ಪರಿಸರ ಸೂಕ್ಷ್ಮವಾದ ಇಂತಹ ಸ್ಥಳಗಳಲ್ಲಿ ರಿಟೈನಿಂಗ್ ವಾಲ್, ಬೆಂಚಿಂಗ್ **(Benching)**, ಸ್ಟೋನ್ ಸ್ಟೆಬಿಲೈಜೇಷನ್ ಡ್ರೈನೇಜ್ ವ್ಯವಸ್ಥೆ ಹಾಗೂ ಮಣ್ಣು ಕುಸಿತ ತಡೆ ಕ್ರಮಗಳನ್ನು ಕಡ್ಡಾಯಗೊಳಿಸಲಾಗಿದೆಯೇ;<br>ಸುರಕ್ಷತೆಯ ದೃಷ್ಟಿಯಿಂದ ರಸ್ತೆಗಳಿಗೆ ಹೊಂದಿಕೊಂಡಿರುವ ಅಪಾಯಕಾರಿ ಭೂಮಿಯನ್ನು ಗುರುತಿಸಿ ಕಾಲಮಿತಿಯಲ್ಲಿ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ವಿಶೇಷ ಕಾರ್ಯಯೋಜನೆ ರೂಪಿಸುವುದೇ? | • ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ಗಳಲ್ಲಿ ಮಣ್ಣು ಕುಸಿತವಾಗುವ ಸೂಕ್ಷ್ಮ ಸ್ಥಳಗಳನ್ನು ಪರಿಶೀಲಿಸಿ, High rised Embackment ನಿರ್ಮಾಣ ಸ್ಥಳಗಳಲ್ಲಿ ಮಣ್ಣು ಕುಸಿಯದಂತೆ ಅಗತ್ಯಕ್ಕೆ ಅನುಗುಣವಾಗಿ ರಿಟೈನಿಂಗ್ ವಾಲ್ ನಿರ್ಮಾಣ ಮಾಡಲಾಗಿರುತ್ತದೆ ಹಾಗೂ ಎತ್ತರದ ಪ್ರದೇಶಗಳಲ್ಲಿ ಕಟಿಂಗ್ ಮಾಡುವ ಸಂದರ್ಭದಲ್ಲಿ 45 ಡಿಗ್ರಿ ಆ್ಯಂಗಲ್‌ನಲ್ಲಿ ಮಣ್ಣನ್ನು ಕಟಿಂಗ್ ಮಾಡಿ ಮಳೆಗಾಲದಲ್ಲಿ ಮಣ್ಣು ಕುಸಿಯದಂತೆ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮವಹಿಸಲಾಗಿರುತ್ತದೆ. ಇದಲ್ಲದೆ, ಅಗತ್ಯವಿರುವ ಡ್ರೈನೇಜ್ ವ್ಯವಸ್ಥೆ, Pitching ಇತ್ಯಾದಿ ಕಾಮಗಾರಿಗಳನ್ನು ಕೂಡ ಅಳವಡಿಸಿಕೊಂಡು ನಿರ್ವಹಿಸಲಾಗುತ್ತಿದೆ.<br>• ರಾಜ್ಯದ ರಾಷ್ಟ್ರೀಯ ಹೆದ್ದಾರಿ (NH), ರಾಜ್ಯ ಹೆದ್ದಾರಿ (SH) ರಸ್ತೆಗಳಿಗೆ ಹೊಂದಿಕೊಂಡಿರುವ ಖಾಸಗಿ ಮತ್ತು ಸರ್ಕಾರಿ ಜಮೀನುಗಳು ಹಾಗೂ ಗುಡ್ಡ ಪ್ರದೇಶದಲ್ಲಿ ರಸ್ತೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ಗುಡ್ಡ ಅಥವಾ ಎತ್ತರದ ಮಣ್ಣಿನ ಪ್ರದೇಶವನ್ನು ಕತ್ತರಿಸುವ ಸಂದರ್ಭದಲ್ಲಿ ಆಯಾ ಪ್ರದೇಶದ ಮಣ್ಣಿನ ಗುಣಲಕ್ಷಣ/ವಿಧಗಳ ಆಧಾರದಲ್ಲಿ ಇಳಿಜಾರಿನ ಅಳತೆಯ ಅನುಪಾತವನ್ನು ನಿರ್ಧರಿಸುವಂತೆ IRC:SP:48 (Hill Road Manual), IRC:56 (Recommended Practices for Treatment of Cut Slopes), Standard MoRTH/IRC specification for Earthwork (Section 300) ಗಳಲ್ಲಿ ತಿಳಿಸಿರುವ ಮಾನದಂಡಗಳ ಹಿನ್ನಲೆಯಲ್ಲಿ ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದ್ದು, ಗುತ್ತಿಗೆ ಒಪ್ಪಂದದ ನಿಯಮಾವಳಿಗಳಂತೆ ಅಗತ್ಯವಿರುವ ಸುರಕ್ಷತಾ ಕಾಮಗಾರಿಗಳನ್ನು ನಿಗದಿತ ಕಾಲಮಿತಿಯೊಳಗೆ ಕೈಗೊಳ್ಳಲಾಗುತ್ತದೆ |

ಸಂಖ್ಯೆ: ಸಿಐ-ಎಂಎಂಎನ್/348/2026

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು